# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತಮೂರನೆಯ ಅಧಿವೇಶನ

**(ಮುಂದುವರೆದ ಉಪವೇಶನ)**

**ಲಘು ಪ್ರಕಟಣೆ ಭಾಗ–2**

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಮಂಗಳವಾರ, 02ನೇ ಮಾರ್ಚ್, 2021**

---

ಸಂಖ್ಯೆ:29

ದಿನಾಂಕ:04.03.2021ರಿಂದ ಪ್ರಾರಂಭವಾಗಲಿರುವ 143ನೇ ಅಧಿವೇಶನದ ಮುಂದುವರೆದ ಉಪವೇಶನದಲ್ಲಿ ಕೋವಿಡ್–19ರ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಮಾನ್ಯ ಸದಸ್ಯರುಗಳು ಸಹಕರಿಸಬೇಕೆಂದು ಕೋರಲಾಗಿದೆ.

01. ಕೋವಿಡ್–19ರ ಸಂಬಂಧದಲ್ಲಿ ದಿನಾಂಕ:02.03.2021ರಿಂದ ವಿಧಾನಸೌಧದ ನೆಲಮಹಡಿಯಲ್ಲಿರುವ ಬ್ಯಾಂಕ್ವೆಟ್ ಹಾಲಿನಲ್ಲಿ RT-PCR ಪರೀಕ್ಷೆಯನ್ನು ನಡೆಸಲು ಸೂಕ್ತ ವ್ಯವಸ್ಥೆಗಳನ್ನು ಮಾಡಲಾಗಿರುತ್ತದೆ.

02. ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಮಾನ್ಯ ಸದಸ್ಯರುಗಳು ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕು
(ಮಾನ್ಯ ಸದಸ್ಯರಿಗೆ ಮಾಸ್ಕ್, ಸ್ಯಾನಿಟೈಸರ್ ಒದಗಿಸಲಾಗುವುದು)

...2

03. ಮಾನ್ಯ ಸದಸ್ಯರ ಆಪ್ತ ಸಹಾಯಕರು ಹಾಗೂ ಗನ್ ಮ್ಯಾನ್ ಅವರುಗಳಿಗೆ ವಿಧಾನಸೌಧದ ನೆಲಮಹಡಿಯಲ್ಲಿರುವ ಬ್ಯಾಂಕ್ವೆಟ್ ಹಾಲಿನ ಮುಂಭಾಗದಲ್ಲಿ ಕುಳಿತುಕೊಳ್ಳಲು ಆಸನ ವ್ಯವಸ್ಥೆಗಳನ್ನು ಮಾಡಲಾಗಿರುತ್ತದೆ. (ವಿಧಾನ ಸೌಧದ ಮೊದಲನೇ ಮಹಡಿಯ ಪ್ರವೇಶಕ್ಕೆ ನಿರ್ಬಂಧಿಸಿದೆ)

04. ಪ್ರತಿದಿನ ವಿಧಾನ ಪರಿಷತ್ತಿನ ಸಭಾಂಗಣವನ್ನು ಹಾಗೂ ಅದರ ಸುತ್ತಮುತ್ತಲಿನ ಎಲ್ಲಾ ಆವರಣಗಳನ್ನು ಸ್ಯಾನಿಟೈಸ್ ಮಾಡಲಾಗುವುದರಿಂದ ಯಾವುದೇ ಕಾಗದ ಪತ್ರ ಹಾಗೂ ವಸ್ತುಗಳನ್ನು ಆಸನಗಳ ಬಳಿಯೇ ಬಿಟ್ಟು ಹೋಗತಕ್ಕದ್ದಲ್ಲ.

05. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು. ನಿಯಮ 330, ಗಮನ ಸೆಳೆಯುವ ಸೂಚನೆಗಳು, ನಿಯಮ 68ರ ಸೂಚನೆಗಳು. ಶೂನ್ಯ ವೇಳೆ, ಇತ್ಯಾದಿ ಸೂಚನೆಗಳಿಗೆ ಸರ್ಕಾರದವರು ನೀಡುವ ಲಿಖಿತ ಉತ್ತರಗಳನ್ನು ಸದನದಲ್ಲಿ ಮಂಡಿಸಿದ ತರುವಾಯ ವಿಧಾನ ಪರಿಷತ್ತಿನ ವೆಬಸೈಟ್‌ನಲ್ಲಿ ಅಳವಡಿಸಲಾಗುವುದು.

06. ಪ್ರಸಕ್ತ ಅಧಿವೇಶನದಲ್ಲಿ ವಿಧಾನ ಪರಿಷತ್ತಿನ ಅಧಿವೇಶನವನ್ನು ವೀಕ್ಷಿಸಲು ಸಾರ್ವಜನಿಕರಿಗೆ ಅವಕಾಶವಿರುವುದಿಲ್ಲ.

**ಎಸ್. ನಿರ್ಮಲ**
ಜಂಟಿ ಕಾರ್ಯದರ್ಶಿ.
ಕರ್ನಾಟಕ ವಿಧಾನ ಪರಿಷತ್ತು.

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ.**

**www.kla.kar.nic.in/council/council.htm**